

ಹೊಳೆ' ಎಂದು ಅರ್ಥೈಸಿಕೊಂಡವನು. ಆ ಅರ್ಥವನ್ನು 'ಅರ್ಥ'ವತ್ತಾಗಿ ಸಾಧಿಸಿ ತೋರಿದವನೂ ನೀನೇ.

ನಾವೆಲ್ಲ ಬದುಕುವ ಈ ಒಂದೇ ಜೀವಿತದೊಳಗೆ ಎಷ್ಟೊಂದು ಬಗೆಯ ಬದುಕುಗಳು ಇವೆಯೋ ಮಾರಾಯ. ಇವೆಲ್ಲವುಗಳನ್ನು ಅರ್ಥ ಮಾಡಿಕೊಳ್ಳುವ ದಾರಿ ಎಂಬುದಾದರೂ ಇದೆಯೇ? ಇದ್ದರೆ ಅರ್ಥ ಮಾಡಿಕೊಂಡು ಬದುಕಿದವರಾದರು ಏಸು ಮಂದಿ?

ಕಾರು ಚಲಾಯಿಸುವುದು ನಿನ್ನ ಅನೇಕ ಖುಷಿಗಳಲ್ಲೊಂದು. ಅದರಲ್ಲೂ ವೇಗ. ಆ ವೇಗವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದ ನಿನ್ನ ಅಸಾಧಾರಣ ಆತ್ಮವಿಶ್ವಾಸ ನನ್ನನ್ನಂತೂ ತಬ್ಬಿಬ್ಬು ಮಾಡುತ್ತಿತ್ತು. ಈ ವೇಗ ನಿನ್ನ ಬದುಕಿನ ಆದ್ಯತೆ ಆಗಿಹೋಗಿತ್ತು. ಒಮ್ಮೆ ನಾವು ಕಬಿನಿಗೆ ಹೋಗಿದ್ದೆವು ನೆನಪಿದೆಯೇ? ದಾರಿಯಲ್ಲಿ ಯಾವುದೋ ಕಾರು ನಮ್ಮನ್ನು ದಾಟಿಕೊಂಡು ಹೋಗಿದ್ದಕ್ಕೆ ನೀನು ಆ ಕಾರನ್ನು ಬೆಂಬಿಡದೇ ಓವರ್ ಟೇಕ್ ಮಾಡಿದ್ದೆ. ನನಗಂತೂ ಪ್ರಾಣವೇ ಹಾರಿಹೋಗಿತ್ತು. ಎರಡು ನಿಮಿಷ ನಿಧಾನವಾಗಿ ಹೋಗೋಣ ಬಿಡೋ ಅಂದರೂ ನೀನು ಕೇಳಲಿಲ್ಲ. ನನ್ನನ್ನು ಯಾರೂ ದಾಟಬಾರದು ಎಂಬ 'ಭಾವ'ವೊಂದು ನಿನ್ನೊಳಗೆ ಇರುವುದು ಆವತ್ತು ಗೋಚರವಾಗಿತ್ತು.

ತೌರಿಂದ ಹೊರಟ ಹುಡುಗಿ 'ತಿಟ್ಟತ್ತಿ ತಿರುಗಿ ನೋಡ್ಯಾಳ' ಎಂಬ ಜಾನಪದ ಗೀತೆ ಆಗಾಗ ನೆನಪಾಗುತ್ತದೆ. ಅಲ್ಲಿ ಹುಡುಗಿ ಹೇಗೆ ತನ್ನ ತವರನ್ನು ಅಥವಾ ಬೆಳೆದ ಊರನ್ನು ತಿರುಗಿ ನೋಡುವಳೋ, ಹಾಗೆ ನಾವೆಲ್ಲರೂ ನಂನಮ್ಮ ಬದುಕನ್ನು ಮತ್ತೆ ಮತ್ತೆ ನೋಡಿಕೊಳ್ಳದೇ ಹೋದರೆ ಅಥವಾ ರಿವರ್ಸ್ ಗೇರ್ ಹಾಕಿಕೊಳ್ಳದಿದ್ದರೆ ನಾವು ಸಾಗಿರುವ ವೇಗ ಅಥವಾ ನಮ್ಮ ಬದುಕಿನ ಗತಿ ಅರ್ಥವಾಗುವುದೇ ಇಲ್ಲವೇನೋ ಎಂಬ ಶಂಕೆ ನನ್ನದು. ಏಕೆಂದರೆ ಇಂದು ವಲಸೆ ಎಂಬುದು ಜಾಗತಿಕ ವಿದ್ಯಮಾನ ಆಗಿದೆ. ಹೀಗಿರುವಾಗ ಕೆಲವು ತಿಟ್ಟು ಹತ್ತಿದ ಮೇಲಾದರೂ ಇದನ್ನು ಮಾಡುವುದು ಅನಿವಾರ್ಯವಾಗಿದೆ. ಆದರೆ ಯಾವ ಒತ್ತಡವು ನಿನ್ನನ್ನು ಹೀಗೆ ಮಾಡಲಾಗದಂತೆ ತಡೆಯೊಡ್ಡುತಿತ್ತೋ ಯಾರು ಬಲ್ಲರು ಗೆಳೆಯ?

ನಿನ್ನಂತೆ ಇಪ್ಪತ್ತನಾಲ್ಕು ಗಂಟೆ ದುಡಿಯುವವರಿಗೆ ಒಂದು ವೈಚಾರಿಕ ಪ್ರಪಂಚ ಇರುತ್ತದೆಯೋ ಇಲ್ಲವೋ ನನಗೆ ಅನುಮಾನವಿದೆ. ಅಲ್ಲೇನಿದ್ದರೂ ಭಾವುಕಲೋಕ ಇರುತ್ತದೆ. ಆ ಭಾವುಕತೆಯೇ ಸಂಬಂಧಗಳ ಬಗ್ಗೆ, ದೇಶದ ಬಗ್ಗೆ, ಸೈನಿಕರ ಬಗ್ಗೆ, ಜಾತಿ–ಧರ್ಮದ ಬಗ್ಗೆ ಯೋಚಿಸಲು ಪ್ರೇರಣೆ ಮತ್ತು ಮಿತಿ. ನಮ್ಮಿಬ್ಬರ ವಿಚಾರಗಳ ವ್ಯತ್ಯಾಸಗಳು ರೈಲು ಹಳಿಗಳಂತಿದ್ದವು. ನಾವು ಒಬ್ಬರ ವಿಚಾರ ಇನ್ನೊಬ್ಬರಿಗೆ ತಲುಪಿಸಲು ಒದ್ದಾಡುತ್ತಿದ್ದೆವು. ಪ್ರೀತಿಯ ಸಂಬಂಧಗಳಲ್ಲಿ ಇದು ಎಷ್ಟು ಕಷ್ಟ ಎಂದು ನಾನು ನಿನ್ನ ಒಡನಾಟದಿಂದ ತಿಳಿಯಲು ಯತ್ನಿಸುತ್ತಲೇ ಇದ್ದೆ. ಇಷ್ಟು ವಿರೋಧಾಭಾಸದ ನಡುವೆಯೂ ನಮ್ಮ ಸಂಬಂಧಗಳು ಹಾಗೆಯೇ ಮುಂದುವರಿದುಕೊಂಡು ಬಂತು. ಮೂರೇ ದಿನಕ್ಕೆ ಸಂಬಂಧ ಮುರಿದುಕೊಳ್ಳುವ ಈ ದುರಿತ ಕಾಲದಲ್ಲಿ ನಮ್ಮ ಸಂಬಂಧ ವಿಶೇಷವೇ ಸರಿ. ಅಥವಾ ನಮ್ಮ ಸಂಬಂಧಗಳಲ್ಲಿ ಯಾವುದೇ ಹಕ್ಕು–ಕರ್ತವ್ಯ–ಜವಾಬ್ದಾರಿಯ ಪ್ರಶ್ನೆಗಳು ಇಲ್ಲದಿರುವುದು ಕೂಡ ನಮ್ಮ ವಿಶ್ವಾಸ ಉಳಿಸಿರಬಹುದು ಮಾರಾಯ. ನಮ್ಮ ಸಂಬಂಧದ ಕುರಿತು ಯೋಚಿಸಿದಾಗೆಲ್ಲ ನೀನು ನನ್ನ 'ಕಾತರ'ದ ರೂಪವಾಗಿಯೋ, ನಾನು ನಿನ್ನ 'ನೆನಪಿನ' ಪ್ರತಿರೂಪವಾಗಿ ಒಬ್ಬರಿಗೊಬ್ಬರು ಕಾಣುತ್ತಿದ್ದವೇನೋ.

ನಿನ್ನ ಬಗ್ಗೆ ನೆನೆದಾಗಲೆಲ್ಲ ಬಸ್ಸು, ರೈಲುಗಳಲ್ಲಿ ಓಡುವ, ಫೋನಿನಲ್ಲೋ, ಇಮೇಲಿನಲ್ಲೋ ಮುಳುಗಿರುವ ಅಥವಾ ಯಾವುದೋ ಆಸ್ಪತ್ರೆಯ ಕಾರಿಡಾರಿನಲ್ಲಿ ಡಾಕ್ಟರ್ ಜತೆ ವ್ಯವಹರಿಸಲು ಕಾದಿರುವ, ಎಲ್ಲೇ ಇದ್ದರೂ ಬೆಳಿಗ್ಗೆ ಪೂಜೆಯನ್ನು ತಪ್ಪಿಸದ… ಇಂತಹ ಚಿತ್ರಗಳೇ ನೀನು ನಮಗೆ ಬಿಟ್ಟು ಹೋಗಿರುವುದು.

ಕೊನೆಗೂ ನಿನ್ನ ವೇಗವೇ ನಿನಗೆ ಮುಳುವಾಯಿತಲ್ಲ ಎಂಬುದೇ ದೊಡ್ಡ ಸಂಕಟವಾಗಿಬಿಟ್ಟಿದೆ ಕಣೋ. ಕುಶಾಲನಗರಕ್ಕೆ ಹೋಗುತ್ತಿದ್ದೀನಿ. ಸಂಜೆ ಬೇಗ ಬರ್ತೀನಿ ಸಿಗೋಣ ಅಂದು ಹೋದವನು ನೀನು. ಅಲ್ಲಿ ಬೇಗ ಬೇಗ ಕೆಲಸ ಮುಗಿಸಿ ಊಟ ಕೂಡ ಮಾಡದೇ ಹೊರಟೆಯಂತೆ. ಆ ಕಾಡಿನ ತಿರುವುಗಳಲ್ಲೂ ವೇಗವಾಗಿ ಬರುತ್ತಿದ್ದೆಯಂತೆ. ಆಗ ಎದುರಿನಿಂದ ಬರುತ್ತಿದ್ದ ಬಸ್ಸೊಂದಕ್ಕೆ… ನೀನು ನನಗೆ ಆ ಸಂಜೆ ಸಿಗದಿದ್ದರೂ ನಷ್ಟವೇನೂ ಆಗುತ್ತಿರಲಿಲ್ಲ. ನಾವು ಎಂದಾದರೂ ಸಿಗಬಹುದಿತ್ತು.

ಆ ಸಂಜೆ ನೀನು ಬರಲಿಲ್ಲ. ನಿನ್ನ ಹೆಣ ಬಂತು.

ಹೀಗೆ ಬರೆಯುತ್ತಾ ಹೋದಷ್ಟೂ ಇದೊಂದು ಮುಗಿಯದ ದುಃಖದ ಕತೆಯಾಗಿ, ನನ್ನೆದೆಯ ನೋವಾಗಿ ಉಳಿದುಬಿಡುತ್ತಲೇ ಇದೆ.

ಶವಾಗಾರದಲ್ಲಿ ನೀನು ಮಲಗಿದ್ದು ನೋಡಿದಾಗ ಇವೆಲ್ಲ ನೆನಪಾದವು. ಸಿಕ್ಕಾಗಲೆಲ್ಲ 'ಬೇಗ ಬೇಗ ಸೆಟಲ್ ಆಗೋ' ಎಂದು ನನಗೆ ಒತ್ತಿ ಒತ್ತಿ ಹೇಳುತ್ತಿದ್ದ ನೀನು 'ಇನ್ನು ನಾಕೈದು ವರ್ಷ ದುಡಿದು ಆಮೇಲೆ ಹೆಂಡತಿ ಮಕ್ಕಳ ಜೊತೆ ಆರಾಮಾಗಿ ಇರೋದಕ್ಕಾಗಿ ಇಷ್ಟೆಲ್ಲಾ ದುಡೀತಿದ್ದೀನಿ' ಎಂದು ಆತ್ಮಾವಲೋಕನದ ಮಾತುಗಳನ್ನು ಆಡುತ್ತಿದ್ದೆ.

ಈಗಲೂ ಕೇವಲ ಬದುಕುತ್ತಿರುವ ನಾನು ಸೆಟಲ್ ಆಗುವೆನೋ ಇಲ್ಲವೋ ತಿಳಿಯದು. ಆದರೆ ಈ ಸೆಟಲ್ ಆಗೋ ಭರದಲ್ಲಿ ನೀನು ತೆತ್ತ ಬೆಲೆ ನಿನ್ನ ಜೀವನ. ಇನ್ನು ಮುಂದುವರಿಸಲಾರೆ ಗೆಳೆಯ.

ನೀನು ಅಷ್ಟು ಆರಾಮವಾಗಿ ಮಲಗಿದ್ದು ಆಗಲೇ ಮಾರಾಯ. ಈಗಲಾದರೂ, ಅಲ್ಲಾದರೂ ವಿಶ್ರಾಂತಿ ತಗೊಳ್ಳೊ.

**Miss you dude.**

ಪ್ರತಿಕ್ರಿಯಿಸಿ: **feedback@sudha.co.in**